# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 18-01-2018ರ ಗುರುವಾರದಂದು ಪೂರ್ವಾಹ್ನ 11-00 ಗಂಟೆಗೆ ಜರುಗಿದ ಸಿಂಡಿಕೇಟ್‌ನ ಮೊದಲನೇ ಸಾಮಾನ್ಯ ಸಭೆಯ ನಡೆವಳಿಗಳು.

**ಹಾಜರಿದ್ದ ಸದಸ್ಯರು:**

| | | |
|---|---|---|
| 1. ಪ್ರೊ. ಸಿ. ಬಸವರಾಜು | – | ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು |
| 2. ಡಾ. ನಿಂಗಮ್ಮ ಸಿ.ಬೆಟ್ಸೂರ್ | – | ಸದಸ್ಯರು |
| 3. ಪ್ರೊ. ಎಸ್.ಎಲ್.ಸುರೇಶ್ | – | ಸದಸ್ಯರು |
| 4. ಶ್ರೀಮತಿ ಎಂ.ಎನ್.ಪೊನ್ನಮ್ಮ, | – | ಸದಸ್ಯರು |
| 5. ಶ್ರೀ ಕೆ.ಎಂ.ಕಾಳೇಗೌಡ | – | ಸದಸ್ಯರು |
| 6. ಪ್ರೊ. ಡಿ. ನಂಜುಂಡಯ್ಯ | – | ಸದಸ್ಯರು |
| 7. ಶ್ರೀ ಲಯನ್ ಹೆಚ್. ರಮೇಶ್, | – | ಸದಸ್ಯರು |
| 8. ಶ್ರೀ ಮಹಮದ್ ಅಬ್ದುಸ್ಸಲಾಂ | – | ಸದಸ್ಯರು |
| 9. ಶ್ರೀ ಕುಮಾರ್ | – | ಸದಸ್ಯರು |
| 10. ಶ್ರೀಮತಿ ಶೃತಿ ತರುಣ್‌ಗಿರಿ | – | ಸದಸ್ಯರು |
| 11. ಶ್ರೀ ಎಂ.ಎಸ್.ಎಸ್. ಕುಮಾರ್ | – | ಸದಸ್ಯರು |
| 12. ಕು. ಸಹನಾ ಶಿವಪ್ಪ | – | ಸದಸ್ಯರು |
| 13. ಪ್ರೊ. ಜೆ. ಸೋಮಶೇಖರ್ | – | ಸದಸ್ಯರು |
| ಕುಲಸಚಿವ(ಪರೀಕ್ಷಾಂಗ) | – | ಸದಸ್ಯರು |
| 14. ಪ್ರೊ. ಬಿ.ಮಹದೇವಪ್ಪ, ಹಣಕಾಸು ಅಧಿಕಾರಿಗಳು. | – | ಸದಸ್ಯರು |
| 15. ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್ | – | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
6. ಶ್ರೀ ಜಗದೀಶ್ ಎಲ್, ಸಿಂಡಿಕೇಟ್ ಸದಸ್ಯರು
7. ಡಾ. ಎ.ಟಿ.ಶಿವರಾಮು, ಸಿಂಡಿಕೇಟ್ ಸದಸ್ಯರು

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ಮೊದಲನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಆಹ್ವಾನಿಸಿ ಕಾರ್ಯಸೂಚಿಯಲ್ಲಿ ಮಂಡಿಸಲಾಗಿರುವ ವಿಷಯಗಳಿಗೆ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ತಮ್ಮ ಅಮೂಲ್ಯ ಸಲಹೆಗಳನ್ನು ನೀಡಬೇಕೆಂದು ಕೋರಿದರು.

ಸಿಂಡಿಕೇಟ್ ಸದಸ್ಯರಾದ ಪ್ರೊ. ಡಿ. ನಂಜುಂಡಯ್ಯನವರು ತಾವು ಹಾಗೂ ಶ್ರೀ ಲಯನ್ ಹೆಚ್. ರಮೇಶ್, ಶ್ರೀ ಕುಮಾರ್, ಶ್ರೀ ಮಹಮದ್ ಅಬ್ದುಸ್ಸಲಾಂ, ಶ್ರೀ ಎಂ.ಎಸ್.ಎಸ್.ಕುಮಾರ್ ಮತ್ತಿತರ ಸದಸ್ಯರು ದಿನಾಂಕ 4-1-2018ರಂದು ಪತ್ರ ನೀಡಿ ಕೆಲವು ವರ್ಗಾವಣೆಗಳನ್ನು ರದ್ದುಗೊಳಿಸುವ ಸಂಬಂಧ ವಿಶೇಷ

ಸಿಂಡಿಕೇಟ್‌ನ ಸಭೆ ಕರೆಯುವಂತೆ ಕೋರಿದ್ದರೂ ಆ ಬಗ್ಗೆ ಮಾನ್ಯ ಕುಲಪತಿಗಳು ಕ್ರಮವಹಿಸಿರುವುದಿಲ್ಲವೇಕೆ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ದಿನಾಂಕ 18-1-2018ರಂದು ಸಾಮಾನ್ಯ ಸಭೆಯನ್ನೇ ಏರ್ಪಡಿಸಿದ್ದರಿಂದ ವಿಶೇಷ ಸಿಂಡಿಕೇಟ್ ಸಭೆಯನ್ನು ಏರ್ಪಡಿಸಿರುವುದಿಲ್ಲವೆಂದು ತಿಳಿಸಿದರು.

ಪ್ರೊ. ಡಿ. ನಂಜುಂಡಯ್ಯನವರು ಕೊನೆಯಪಕ್ಷ ಪತ್ರ ಬರೆದಾದರೂ ಮಾಹಿತಿ ನೀಡಬಹುದಾಗಿತ್ತಲ್ಲವೇ ಎಂದು ಸ್ಪಷ್ಟೀಕರಣ ಕೋರಿದರು.

ಮಾನ್ಯ ಕುಲಪತಿಗಳು ಮುಂದಿನ ದಿನಗಳಲ್ಲಿ ಈ ರೀತಿಯಾಗದಂತೆ ಕ್ರಮವಹಿಸುವುದಾಗಿ ಭರವಸೆ ನೀಡಿದರು.

ನಂತರ ಕಾರ್ಯಸೂಚಿಯನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| 1 | ದಿನಾಂಕ 15-12-2017ರಂದು ನಡೆದ ಸಿಂಡಿಕೇಟಿನ ಎಂಟನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ |
| ತೀರ್ಮಾನ | ವಿಷಯಸಂಖ್ಯೆ 12.37ಕ್ಕೆ ಸಂಬಂಧಿಸಿದಂತೆ ಶ್ರೀಮತಿ ಬಿ.ಎಂ.ಮಂಜುಳ, ಇವರು ಬೆರಳಚ್ಚುಗಾರರಿಂದ ಶೀಘ್ರಲಿಪಿಗಾರರಾಗಿ (ತಾತ್ಕಾಲಿಕ) ನೇಮಕಗೊಂಡಿರುವುದರಿಂದ, ಸದರಿಯವರು ತಾತ್ಕಾಲಿಕ ಶೀಘ್ರಲಿಪಿಗಾರರಾಗಿ ಯಥಾಸ್ಥಿತಿಯಲ್ಲಿ ಮುಂದುವರೆಸಲು ಹಾಗೂ ಉಳಿದಂತೆ ಸಿಂಡಿಕೇಟ್ ಉಪಸಮಿತಿಯ ನಡಾವಳಿಯನ್ನು ಅನುಮೋದಿಸಲು ತೀರ್ಮಾನಿಸಿ ದಿನಾಂಕ 15-12-2017ರಂದು ನಡೆದ ಸಿಂಡಿಕೇಟಿನ ಎಂಟನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು. |
| 2 | ದಿನಾಂಕ 15-12-2017ರಂದು ನಡೆದ ಸಿಂಡಿಕೇಟಿನ ಎಂಟನೇ ಸಾಮಾನ್ಯ ಸಭೆಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| ತೀರ್ಮಾನ | ಸಿಂಡಿಕೇಟ್ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ವಿಶ್ವವಿದ್ಯಾನಿಲಯವು ಕ್ರಮಕೈಗೊಂಡಿರುವ ವರದಿಯನ್ನು ಗಮನಿಸಲಾಯಿತು. |
| 2018/1.1 | ಡಾ. ಮುಜಾಫರ್ ಎಚ್.ಅಸ್ಸಾದಿ, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಬಾಂಗ್ಲಾದೇಶಕ್ಕೆ ತೆರಳಲು ಅನುಮತಿ ನೀಡಿರುವ ಬಗ್ಗೆ. |
| ತೀರ್ಮಾನ | ಡಾ. ಮುಜಾಫರ್ ಎಚ್.ಅಸ್ಸಾದಿ, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಅವರು ದಿನಾಂಕ 02-01-2018ರಿಂದ 06-01-2018ರವರೆಗಿನ (30-12-2017ರಿಂದ 01-01-2018ರವರೆಗೆ 2017-18ನೇ ಶೈಕ್ಷಣಿಕ ವರ್ಷದ ಮಧ್ಯಂತರ ಬಿಡುವಿನ ರಜೆ ಒಳಗೊಂಡಂತೆ) ಅವಧಿಯನ್ನು ಅನ್ಯಕಾರ್ಯ ನಿಮಿತ್ತವೆಂದು ಪರಿಗಣಿಸಿ, ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ, ಬಾಂಗ್ಲಾ ದೇಶಕ್ಕೆ ಭೇಟಿ ನೀಡಲು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| 2018/1.2 | ಡಾ. ಎಸ್.ವೆಂಕಟೇಶ್, ಸಹಾಯಕ ಪ್ರಾಧ್ಯಾಪಕರು, ಬಿ.ಬಿ.ಎಂ ವಿಭಾಗ, ಮಹಾರಾಜ ಕಾಲೇಜು, ಮೈಸೂರು, ಇವರನ್ನು ಕುವೆಂಪು ವಿಶ್ವವಿದ್ಯಾನಿಲಯ, ಇಲ್ಲಿನ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಹಾಗೂ ಹುದ್ದೆಯ ಮೇಲಿನ ಹಕ್ಕನ್ನು ಕಾಯ್ದಿರಿಸುವ ಬಗ್ಗೆ. |
| ತೀರ್ಮಾನ | ಡಾ. ಎಸ್. ವೆಂಕಟೇಶ್, ಸಹಾಯಕ ಪ್ರಾಧ್ಯಾಪಕರು, ಬಿ.ಬಿ.ಎಂ. ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ, ಇಲ್ಲಿ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾಗಿ ನೇಮಕಗೊಂಡಿರುವುದರಿಂದ ಸದರಿಯವರ ಮನವಿ ಮೇರೆಗೆ ಶ್ರೀಯುತರನ್ನು |

| | |
|---|---|
| | ದಿನಾಂಕ 29-12-2017ರಂದು ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು ಮತ್ತು ಅವರ ಸಹಾಯಕ ಪ್ರಾಧ್ಯಾಪಕರ ಹುದ್ದೆಯ ಮೇಲಿನ ಹಕ್ಕನ್ನು ಕೆ.ಸಿ.ಎಸ್.ಆರ್. ನಿಯಮಾನುಸಾರ ಕಾಯ್ದಿರಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/1.3** | ದಿನಾಂಕ 14.11.2017 ರಂದು ಜರುಗಿದ ವಿಶ್ವವಿದ್ಯಾನಿಲಯದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| ತೀರ್ಮಾನ | ದಿನಾಂಕ 14.11.2017 ರಂದು ಜರುಗಿದ ಮೈಸೂರು ವಿಶ್ವವಿದ್ಯಾನಿಲಯ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು ಹಾಗೂ ಕಟ್ಟಡ ಸಮಿತಿ ಸಭೆಗೆ [ಶ್ರೀಮತಿ. ಹೊನ್ನಮ್ಮ ಮತ್ತು ಡಾ. ನಂಜುಂಡಯ್ಯ. ಟಿ.] ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಲು ಸಭೆಯು ತೀರ್ಮಾನಿಸಿತು. |
| **2018/1.4** | MHRDಯವರು ಹೊರತಂದಿರುವ ಭಾರತವಾಣಿ ಎಂಬ ಪೋರ್ಟಲ್ ಮತ್ತು ಆಪ್‌ಗಳ ಮೂಲಕ ಅಂತರ್ಜಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆಗಳನ್ನು ಹೊರಡಿಸುವ ಸಂಬಂಧ, CIIL, Mysore ಅವರೊಂದಿಗೆ 2ನೇ Deed of Assignment (DOA) ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | MHRD ಯವರು ಹೊರತಂದಿರುವ ಭಾರತವಾಣಿ ಎಂಬ ಪೋರ್ಟಲ್ ಮತ್ತು ಆಪ್‌ಗಳ ಮೂಲಕ ಅಂತರ್ಜಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಕಟಣೆಗಳನ್ನು ಹೊರಡಿಸುವ ಸಂಬಂಧ, CIIL, Mysore ಅವರೊಂದಿಗೆ 2ನೇ Deed of Assignment (DOA) ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/1.5** | ಡಾ. ಲಲಿತಮ್ಮ, ಎಂ.ಎಸ್. ಇವರ ಗಳಿಕೆ ರಜೆ ನಗಧೀಕರಣ ಸೌಲಭ್ಯದ ಅದೇಶವನ್ನು ಹಿಂಪಡೆಯುವ ಬಗ್ಗೆ. |
| | ಡಾ. ಲಲಿತಮ್ಮ ಎಂ.ಎಸ್. ನಿವೃತ್ತ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ದಿನಾಂಕ 03-08-2009ರಂದು ಪಾಂಡಿಚೇರಿ ವಿಶ್ವವಿದ್ಯಾನಿಲಯಕ್ಕೆ ಪ್ರಾಧ್ಯಾಪಕರಾಗಿ ಸೇರುವ ಮೊದಲು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದಿ.01-08-1979 ರಿಂದ 02-08-2009 ರವರೆಗೆ ಮೂವತ್ತು ವರ್ಷಗಳವರೆಗೆ ಸೇವೆಯನ್ನು ಸಲ್ಲಿಸಿದ್ದುದರ ಅವಧಿಯಲ್ಲಿ ಅವರು ಗಳಿಸಿರುವ ಗಳಿಕೆ ರಜೆಯನ್ನು ನಗಧೀಕರಣಗೊಳಿಸಿಕೊಳ್ಳಲು ದಿನಾಂಕ 05-01-2017ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಅನುಮತಿ ನೀಡಲಾಗಿತ್ತು.<br>ಮೈಸೂರು ವಿಶ್ವವಿದ್ಯಾನಿಲಯದ ಸೇವೆಯಲ್ಲಿ ವಯೋನಿವೃತ್ತಿ ಹೊಂದದೆ, ರಾಜೀನಾಮೆ ನೀಡಿರುವುದರಿಂದ, ಕೆಸಿಎಸ್‌ಆರ್ ನಿಯಮಗಳಲ್ಲಿ ರಾಜೀನಾಮೆ ನೀಡುವ ದಿನಾಂಕದವರೆಗಿನ ಗಳಿಕೆ ರಜೆಯನ್ನು ನಗದೀಕರಣ ಸೌಲಭ್ಯವನ್ನು ನೀಡಲು ಅವಕಾಶವಿಲ್ಲದಿರುವುದರಿಂದ, ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಕೋರಲಾಗಿ, ಈ ಕೆಳಕಂಡಂತೆ ಸಲಹೆಯನ್ನು ನೀಡಿರುತ್ತಾರೆ.<br>"The earned leave benefit is given to an employee on attaining superannuation at University of Mysore and as the petitioner did not retire at Mysore University, she is not entitled for the earned leave benefits. As per Rule 118-A(1) of KCSR there is no provision for encashment of earned leave in respect of the employees who quits the service or resigns". |
| ತೀರ್ಮಾನ | ಮೇಲಿನ ಕಾನೂನು ಸಲಹೆಗಾರರ ಅಭಿಪ್ರಾಯ ಹಾಗೂ ಕೆ.ಸಿ.ಎಸ್.ಆರ್ಸ್ ನಿಯಮಗಳನ್ನು ಅವಲೋಕಿಸಿದ ಸಿಂಡಿಕೇಟ್ ಅದರನ್ವಯ ಡಾ. ಲಲಿತಮ್ಮ ಎಂ.ಎಸ್. ನಿವೃತ್ತ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ್ದ ಅವಧಿಯಲ್ಲಿನ ಗಳಿಕೆ ರಜೆ ನಗದೀಕರಣಗೊಳಿಸಲು ನೀಡಿರುವ ಅನುಮತಿಯ ಆದೇಶವನ್ನು ಹಿಂಪಡೆಯಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/1.6** | 2018-19ನೇ ಶೈಕ್ಷಣಿಕ ಸಾಲಿನಿಂದ ಮಂಡ್ಯದ ಮಾಂಡವ್ಯ ಪ್ರಥಮ ದರ್ಜೆ ಕಾಲೇಜನ್ನು ಮುಚ್ಚುವ ಬಗ್ಗೆ. |

| | |
|---|---|
| **ತೀರ್ಮಾನ** | ಮಂಡ್ಯದ ಮಾಂಡವ್ಯ ಪ್ರಥಮ ದರ್ಜೆ ಕಾಲೇಜಿನ ಆಡಳಿತ ಮಂಡಳಿಯ ನಿರ್ಣಯದಂತೆ, ಬೋಧಕ ಮತ್ತು ಬೋಧಕೇತರ ನೌಕರರಿಗೆ ಯಾವುದೇ ತೊಂದರೆಯಾಗದಂತೆ ಹಾಗೂ ವಿದ್ಯಾರ್ಥಿಗಳ ಪರೀಕ್ಷೆಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಷರತ್ತಿನೊಂದಿಗೆ ಸದರಿ ಕಾಲೇಜನ್ನು 2018–19ನೇ ಶೈಕ್ಷಣಿಕ ಸಾಲಿನಿಂದ ಮುಚ್ಚಲು ಕ.ರಾ.ವಿ.ವಿ.ನಿಲಯ ಅಧಿನಿಯಮ 2000 ಪ್ರಕರಣ 65(2)(3)ರಂತೆ ಈ ಕಾಲೇಜಿನ ಸಂಯೋಜನೆಯನ್ನು ಹಿಂತೆಗೆದುಕೊಳ್ಳುವ ವಿಷಯವನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/1.7** | ಶ್ರೀ ಎನ್.ಎ. ಉಮೇಶ, ಸಹಾಯಕ ಅಭಿಯಂತರರು, ಇವರ ಹುದ್ದೆಯನ್ನು ದಿನಾಂಕ 1.8.2006ರಿಂದ ಜಾರಿಗೆ ಬಂದಂತೆ ಕಿರಿಯ ಅಭಿಯಂತರರ ಹುದ್ದೆಯಿಂದ ಸಹಾಯಕ ಅಭಿಯಂತರರ ಹುದ್ದೆಗೆ ಮಾರ್ಪಡಿಸಿರುವ ಬಗ್ಗೆ. |
| | ಶ್ರೀ ಎನ್.ಎ.ಉಮೇಶ, ಸಹಾಯಕ ಅಭಿಯಂತರರು, ಇವರ ಹುದ್ದೆಯನ್ನು ದಿನಾಂಕ 01.08.2006ರಿಂದ ಜಾರಿಗೆ ಬಂದಂತೆ ಕಿರಿಯ ಅಭಿಯಂತರರ ಹುದ್ದೆಯಿಂದ ಸಹಾಯಕ ಅಭಿಯಂತರರ ಹುದ್ದೆಗೆ ಮಾರ್ಪಡಿಸಿರುವ ಬಗ್ಗೆ ಸದರಿ ಉದ್ಯೋಗಿಯು ಸಲ್ಲಿಸಿರುವ ವಿವರಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಶ್ರೀ ಎನ್. ಎ. ಉಮೇಶ, ಸಹಾಯಕ ಅಭಿಯಂತರರು, ಇವರಿಗೆ ನೀಡಲಾಗಿರುವ ಕಿರಿಯ ಅಭಿಯಂತರರ ಹುದ್ದೆಯಿಂದ ಸಹಾಯಕ ಅಭಿಯಂತರರ ಪದೋನ್ನತಿಯನ್ನು ಹಿಂಪಡೆಯುವುದು ಹಾಗೂ ಸದರಿಯವರಿಗೆ 2006ರಿಂದ ಇಲ್ಲಿಯವರೆವಿಗೂ ನೀಡಲಾಗಿರುವ ಹೆಚ್ಚುವರಿ ವೇತನವನ್ನು ಕಟಾವು ಮಾಡುವ ಮತ್ತು NPS ಸ್ಕೀಂ ಅಡಿಯಲ್ಲಿ ಪಿಂಚಣಿ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆದು ನಂತರ ವಿಷಯವನ್ನು ಮುಂದಿನ ಸಿಂಡಿಕೇಟ್‌ಗೆ ಮಂಡಿಸಲು ತೀರ್ಮಾನಿಸಿತು. |
| **2018/1.8** | Conducting enquiry against Smt. I.U. Kanthi, Superintendent (dismissed), University of Mysore – directions of the Hon'ble High Court in W.P.No.33165/2016 (GM-res) filed by Smt. Kanthi – reg. |
| **ತೀರ್ಮಾನ** | ಶ್ರೀಮತಿ ಐ.ಯು.ಕಾಂತಿ, ಅಧೀಕ್ಷಕಿ (dismissed), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮೇಲಿನ ವಿಚಾರಣೆಯನ್ನು ಕೆಸಿಎಸ್‌ಆರ್ ನಿಯಮಾನುಸಾರ ಕೈಗೊಳ್ಳಲು ಸಾಧ್ಯವಿಲ್ಲದಿರುವುದರಿಂದ ಸದರಿ ಪ್ರಕರಣದ ವಿಷಯವನ್ನು ಕೈಬಿಡಲು ಸಿಂಡಿಕೇಟ್ ನಿರ್ಧರಿಸಿತು. |
| **2018/1.9** | ಡಿ.ಲಿಟ್ ಪ್ರಬಂಧಕ್ಕೆ ಸಂಬಂಧಿಸಿದಂತೆ ಪ್ರಬಂಧದ ಅಂತಿಮ ಸಾರಾಂಶದ ಪ್ರತಿಗಳನ್ನು ಮತ್ತು ಇತರೆ ದಾಖಲೆಗಳನ್ನು ಪರಿಶೀಲನೆ ಮಾಡುವ ಬಾಹ್ಯ ಪರೀಕ್ಷಕರಿಗೆ ಗೌರವ ಧನವನ್ನು ಹೆಚ್ಚಿಸುವ ಬಗ್ಗೆ. |
| **ತೀರ್ಮಾನ** | ಡಿ.ಲಿಟ್ ಪ್ರಬಂಧದ ಅಂತಿಮ ಸಾರಾಂಶದ ಪ್ರತಿಗಳನ್ನು ಮತ್ತು ಇತರೆ ದಾಖಲೆಗಳನ್ನು ಪರಿಶೀಲನೆ ಮಾಡುವ ಬಾಹ್ಯ ಪರೀಕ್ಷಕರಿಗೆ ಗೌರವ ಧನವನ್ನು (ಸಭಾ ಭತ್ಯೆ) ರೂ.500/–ರಿಂದ 2,000/– (ಎರಡು ಸಾವಿರ ಮಾತ್ರ)ಗಳಿಗೆ ಹೆಚ್ಚಿಸಲು ಸಿಂಡಿಕೇಟ್ ಅನುಮೋದಿಸಿತು. |
| **2018/1.10** | ಕ್ರೋಢೀಕೃತ ಕಾಮಗಾರಿಗಳ ಬಾಕಿ ಹುಂಡಿಯ ಮೊತ್ತವನ್ನು ಖಾತೆಯಲ್ಲಿ ಮರುಹೊಂದಾಣಿಕೆ ಮಾಡುವ ಬಗ್ಗೆ. |
| **ತೀರ್ಮಾನ** | 2017–18ನೇ ಸಾಲಿನ ಆಯವ್ಯಯದಲ್ಲಿ "ಸಹೋದ್ಯಮ ಕೋರ್ಸ್–155–Construction of Buildings" ಶೀರ್ಷಿಕೆಯಡಿಯಲ್ಲಿ ರೂ.1,00,00,000/–ಗಳನ್ನು ಮಾತ್ರ ನಿಗದಿಪಡಿಸಲಾಗಿದ್ದು, ಈ ಕೆಳಕಂಡ ಕಾಮಗಾರಿಗಳಿಗೆ ಬಾಕಿ ಉಳಿದಿರುವ ಮೊತ್ತ ರೂ.5,60,35,850/– ಗಳನ್ನು **Collaboration** ಖಾತೆಯಲ್ಲಿ ಮರುಹೊಂದಾಣಿಕೆ ಮಾಡಿ ಪಾವತಿಸುವ ಮೊದಲು ಆಯಾ ವರ್ಷಕ್ಕೆ ನಿಗದಿಯಾಗಿದ್ದಂತಹ ಕಾಮಗಾರಿಗಳನ್ನು ಆಯಾ ವರ್ಷದಲ್ಲಿ ನಿಗದಿತ ಕಾಲಮಿತಿಯೊಳಗೆ ಪೂರೈಸದಿರುವ ಬಗ್ಗೆ ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗದ ಕಾರ್ಯಪಾಲಕ ಅಭಿಯಂತರರಿಗೆ ನೋಟೀಸ್ ಅನ್ನು ಜಾರಿಮಾಡಿ ವಿವರಣೆ ಪಡೆದು ನಂತರ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| Sl. No | Name of the Works | Est. Amount (Rs. in Lakhs) | Tendered Amount | Up to date Bill | Balance Amount | Head of A/c |
|---|---|---|---|---|---|---|
| 1 | Construction of extension blocks for Genetics & Economics and Molecular Biology/ Medicine Departments at MGM | 200.00 | 25721324 | 16055972 | 9665352 | Collaboration Fund 2017-18 |
| 2 | Construction and improvements of additional roads at MGM. | 200.00 | 25661735 | 14524969 | 11136766 | -do- |
| 3 | Construction of Sabaramati Ashram at Gandhi Bhavan premises, MGM | 50.00 | 6418594 | 5415231 | 1003363 | -do- |
| 4 | Construction of Shopping complex at Round Canteen building premises, MGM | 60.00 | 7731391 | 6295328 | 1436063 | -do- |
| 5 | Construction of Centenary Auditorium, Planetarium, Interactive Museum at UOM. | 375.00 | 46102356 | 13308050 | 32794306 | -do- |
| | Total | 885.00 | 1111635400 | 55599550 | 56035850 | |

| | |
|---|---|
| **2018/1.11** | ದಿವಂಗತ ಸುರೇಶ್ ಎಚ್.ಎಂ. ಸ್ಟೋರ್ ಕೀಪರ್, ಪ್ರಸಾರಾಂಗ ಮಾನಸಗಂಗೋತ್ರಿ, ಮೈಸೂರು ಅವರ ಮಗನಾದ ಶ್ರೀ ಎಚ್.ಎಸ್.ಕೀರ್ತಿರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ಮೃತರಾದ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ಮೃತರಾದ ದಿವಂಗತ ಸುರೇಶ್ ಎಚ್.ಎಂ. ಸ್ಟೋರ್ ಕೀಪರ್, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು ಅವರ ಮಗನಾದ ಶ್ರೀ ಕೀರ್ತಿ.ಎಚ್.ಎಸ್. ರವರಿಗೆ ಅನುಕಂಪದ ಆಧಾರದ ಮೇಲೆ ಅವರ ವಿದ್ಯಾರ್ಹತೆಯನುಸಾರ ಪರಿಚಾರಕರ ಹುದ್ದೆಯಲ್ಲಿ ನೇಮಕಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/1.12** | ಸರ್ಕಾರಿ ಮಹಾವಿದ್ಯಾಲಯ(ಸ್ವಾಯತ್ತ), ಮಂಡ್ಯ ಇಲ್ಲಿಗೆ ಸಮಾಜಶಾಸ್ತ್ರ ವಿಷಯದಲ್ಲಿ ಸಂಶೋಧನಾ ಮಾನ್ಯತೆ ನೀಡುವ ಬಗ್ಗೆ– ಪರಿವೀಕ್ಷಣಾ ಸಮಿತಿಯವರು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರಿ. |
| **ತೀರ್ಮಾನ** | ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ ಇಲ್ಲಿಗೆ ಸಮಾಜಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಲು ಪರಿವೀಕ್ಷಣಾ ಸಮಿತಿ ಭೇಟಿ ನೀಡಿದ್ದು, ಕೆಲವು ಷರತ್ತುಗಳನ್ನು ವಿಧಿಸಿದನ್ನು ಸಂಸ್ಥೆಯವರು ಪೂರೈಸಿರುವುದರಿಂದ, ಸದರಿ ಸಂಸ್ಥೆಗೆ ಮಾನ್ಯತೆ ನೀಡುವ ಬಗ್ಗೆ ಪರಿವೀಕ್ಷಣಾ ಸಮಿತಿಯವರು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/1.13** | Koshys Business School, 31/1, Hennur-Bangalur Road, Kadusonnappanahalli, Kannur Post, Bangalore-49, ಇವರಿಗೆ ಹೊಸದಾಗಿ Management ವಿಷಯದಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ– ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ನೀಡುವ ಬಗ್ಗೆ. |
| **ತೀರ್ಮಾನ** | Koshys Business School, 31/1, Hennur-Bangalur Road, Kadusonnappanahalli, Kannur Post, Bangalore-49, ಇವರಿಗೆ ಹೊಸದಾಗಿ Management ವಿಷಯದಲ್ಲಿ ಸಂಶೋಧನೆ ನಡೆಸಲು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ– |

| | |
|---|---|
| | ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು ಹಾಗೂ 2016–17ನೇ ಸಾಲಿಗೆ ನಿಗಧಿಪಡಿಸಲಾದ Application & Processing ಶುಲ್ಕವನ್ನು ಮಾತ್ರ ಸದರಿ ಸಂಸ್ಥೆಯವರು ಪಾವತಿಸಿದ್ದು, 2017–18ನೇ ಸಾಲಿಗೆ ಶುಲ್ಕಗಳ ಪರಿಷ್ಕರಣೆ ಆಗಿರುವುದರಿಂದ, ವ್ಯತ್ಯಾಸದ ಮೊತ್ತವನ್ನು ಪಾವತಿಸಿಕೊಂಡು, 2017–18ನೇ ಸಾಲಿಗೆ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆ ನೀಡಲು ಸಭೆಯು ನಿರ್ಧರಿಸಿತು. |
| **2018/1.14** | ಡಾ. ಅಕ್ಕಮಹಾದೇವಿ, ನಿವೃತ್ತ ಸಹಾಯಕ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ಪಿಂಚಣಿ ಸೌಲಭ್ಯಗಳ ಬಗ್ಗೆ. |
| **ತೀರ್ಮಾನ** | ಕೆಸಿಎಸ್ಆರ್ 213ರ ಪ್ರಕಾರ ಅಪರಾಧ, ದುರ್ನಡತೆ ಅಥವಾ ತಪ್ಪಿತಸ್ಥನೆಂದು ಕಂಡು ಬಂದರೆ ಅವರ ನಿವೃತ್ತಿ ವೇತನವನ್ನು ಅಥವಾ ಅದರ ಭಾಗವನ್ನು ತಡೆಹಿಡಿಯಬಹುದು ಅಥವಾ ಹಿಂತೆಗೆದುಕೊಳ್ಳಲು ನಿಯಮದಲ್ಲಿ ಅವಕಾಶವಿರುತ್ತದೆ. ಆದರೆ, ಡಾ. ಅಕ್ಕಮಹಾದೇವಿಯವರ ಪ್ರಕರಣದ ಬಗ್ಗೆ ಸಿಎಜಿ ಆಡಿಟ್ ಆಕ್ಷೇಪಣೆಯ ಬಗ್ಗೆ ಈಗಾಗಲೇ ವಿಶ್ವವಿದ್ಯಾನಿಲಯವು ಮಾಹಿತಿ ಒದಗಿಸಿದ್ದು ಯಾವುದೇ ಪ್ರತ್ಯುತ್ತರ ಬಾರದೇ ಇರುವ ಪ್ರಯುಕ್ತ, ಮತ್ತು ಕಾನೂನು ಸಲಹೆಗಾರರು ಸಹ Provisional pension may be given ಎಂದು ಅಭಿಪ್ರಾಯವನ್ನು ಸೂಚಿಸಿರುವುದರ ಹಿನ್ನೆಲೆಯಲ್ಲಿ, ಡಾ. ಅಕ್ಕಮಹಾದೇವಿ, ನಿವೃತ್ತ ಸಹಾಯಕ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರಿಗೆ Provisional pension ಅನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/1.15** | ದಿವಂಗತ ಸಿದ್ದಯ್ಯ, ಸೇವಕ, ಹಣಕಾಸು ವಿಭಾಗ, ಮೈ.ವಿ.ವಿ. ಮೈಸೂರು ಅವರ ಪತ್ನಿಯಾದ ಶ್ರೀಮತಿ ಸಿ. ಲೀಲಾವತಿರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ಮೃತರಾದ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮ ಪ್ರಕರಣ 6(ಬಿ) ಅನ್ವಯ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ಮೃತರಾದ ದಿವಂಗತ ಸಿದ್ದಯ್ಯ, ಸೇವಕ, ಹಣಕಾಸು ವಿಭಾಗ, ಮೈ.ವಿ.ವಿ. ಮೈಸೂರು ಅವರ ಪತ್ನಿಯಾದ ಶ್ರೀಮತಿ ಲೀಲಾವತಿ ಸಿ., ರವರಿಗೆ ಅನುಕಂಪದ ಆಧಾರದ ಮೇಲೆ ಅವರ ವಿದ್ಯಾರ್ಹತೆಯನುಸಾರ ನಾಲ್ಕನೇ ದರ್ಜೆ ನೌಕರರ ಹುದ್ದೆಗೆ ನೇಮಕಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/1.16** | ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:2368:2011ರ ತೀರ್ಪಿನ ಅನ್ವಯ, ಮೈಸೂರು ವಿಶ್ವವಿದ್ಯಾನಿಲಯದ ಬೋಧಕೇತರ ವೃಂದದ ತಾತ್ಕಾಲಿಕ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುವ ಬಗ್ಗೆ. |
| **ತೀರ್ಮಾನ** | ಮಾನ್ಯ ಸರ್ವೋಚ್ಛ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:2368:2011ರ ತೀರ್ಪಿನ ಅನ್ವಯ ಹಾಗೂ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾ ನಿಯಮಗಳು) ವಿಧಾನಸೌಧ, ಬೆಂಗಳೂರು ಇವರ ಆದೇಶದನ್ವಯ, ಸರ್ಕಾರದ ಆಡಳಿತ ವ್ಯಾಪ್ತಿಗೊಳಪಡುವ ಇಲಾಖೆಗಳು/ ಸ್ವಾಯತ್ತತೆ ಸಂಸ್ಥೆಗಳು ಮತ್ತು ಸರ್ಕಾರದ ಅನುದಾನ ಪಡೆಯುವ ಸಂಸ್ಥೆಗಳಲ್ಲಿ ಜೇಷ್ಠತಾ ಪಟ್ಟಿಗಳನ್ನು ಪರಿಷ್ಕರಿಸುವಂತೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರ, ಬೆಂಗಳೂರು ಇವರು ತಮ್ಮ ಪತ್ರದಲ್ಲಿ ನಿರ್ದೇಶಿಸಿರುವಂತೆ, ಮೈಸೂರು ವಿಶ್ವವಿದ್ಯಾನಿಲಯದ ಬೋಧಕೇತರ ಉದ್ಯೋಗಿಗಳ ಜೇಷ್ಠತಾ ಪಟ್ಟಿಯನ್ನು ದಿನಾಂಕ 27-04-1978 ರಿಂದ ಜಾರಿಗೆ ಬಂದಂತೆ ಪರಿಷ್ಕರಿಸಲು ತಿಳಿಸಿರುವ ಹಿನ್ನೆಲೆಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿಯೂ ಸಹ ಬೋಧಕೇತರ ವೃಂದದ ತಾತ್ಕಾಲಿಕ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಿ ಸರ್ಕಾರಕ್ಕೆ ಕಳುಹಿಸಿದ್ದು, ಹಾಗೂ ಸದರಿ ಜೇಷ್ಠತಾ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಮತ್ತು ಈ ಸಂಬಂಧ ನೌಕರರುಗಳಿಂದ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ದಿ.31.01.2018ರೊಳಗೆ ಸಲ್ಲಿಸುವಂತೆ ತಿಳಿಸಲಾಗಿದ್ದು ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/1.17** | ಪ್ರಾಣಿಶಾಸ್ತ್ರ, ಆಹಾರ ವಿಜ್ಞಾನ ಮತ್ತು ಪೋಷಣೆ ಹಾಗೂ ಶಿಕ್ಷಣ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಿಸುವ ಬಗ್ಗೆ. |

**ತೀರ್ಮಾನ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಎರಡು ವರ್ಷಗಳವರೆಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಅಧ್ಯಕ್ಷರ ನೇಮಕಾತಿಗೆ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮಾರ್ಗಸೂಚಿಯನುಸಾರ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರು ವವರ ನಂತರ ಅರ್ಹರಾಗಿರುವ ಹಿರಿಯ ಪ್ರಾಧ್ಯಾಪಕರುಗಳನ್ನು ಈ ಕೆಳಗಿನ ಅಧ್ಯಯನ ವಿಭಾಗಗಳಿಗೆ ಅವರ ಹೆಸರುಗಳ ಮುಂದೆ ಸೂಚಿಸಿರುವ ದಿನಾಂಕದಿಂದ ಜಾರಿಗೆ ಬಂದಂತೆ ಅಧ್ಯಕ್ಷರನ್ನಾಗಿ ನೇಮಿಸಲು ಸಿಂಡಿಕೇಟ್ ತೀರ್ಮಾನಿಸಿತು.

| ಕ್ರಮ ಸಂಖ್ಯೆ | ಅಧ್ಯಯನ ವಿಭಾಗ | ಅಧ್ಯಕ್ಷರಾಗಿ ನೇಮಕವಾದವರು | ಜಾರಿಗೆ ಬರುವ ದಿನಾಂಕ |
|---|---|---|---|
| 1. | ಪ್ರಾಣಿಶಾಸ್ತ್ರ | ಪ್ರೊ.ಎಂ.ಭಾಗ್ಯ | 01–02–2018 |
| 2. | ಆಹಾರ ವಿಜ್ಞಾನ ಮತ್ತು ಪೋಷಣೆ | ಪ್ರೊ. ಅಸ್ನಾ ಉರೂಜ್ (ಪ್ರೊ.ಅಸ್ನಾ ಉರೂಜ್ ಅವರನ್ನು ಹೊರತುಪಡಿಸಿ, ವಿಭಾಗದಲ್ಲಿ ಯಾರೂ ಪ್ರಾಧ್ಯಾಪಕರು/ ಸಹ ಪ್ರಾಧ್ಯಾಪಕರು ಇರುವುದಿಲ್ಲ) | 01–03–2018 |
| 3. | ಶಿಕ್ಷಣ | ಡಾ. ನಿಂಗಮ್ಮ ಸಿ. ಬೆಟ್ಸೂರ್. | 01–03–2018 |

**2018/1.18**

ಮೈಸೂರು ವಿಶ್ವವಿದ್ಯಾನಿಲಯ ಹಾಗೂ Huanghuai University, China ಇವುಗಳ ನಡುವಣ Twinning Degree Programme ಪ್ರಾರಂಭಿಸುವ ಸಂಬಂಧ University of Mysore Chinese Programme (UOMCP) ಖಾತೆಯನ್ನು ಹಣಕಾಸು ಅಧಿಕಾರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಹೆಸರಿನಲ್ಲಿ ಖಾತೆಯನ್ನು ತೆರೆದಿರುವ ಬಗ್ಗೆ – ಅನುಸಮರ್ಥನೆಗಾಗಿ.

**ತೀರ್ಮಾನ**

ಮೈಸೂರು ವಿಶ್ವವಿದ್ಯಾನಿಲಯ ಹಾಗೂ Huanghuai University, China ಇವುಗಳ ನಡುವಣ ಪ್ರಾರಂಭಿಸುವುದರ ಬಗ್ಗೆ ಈಗಾಗಲೇ ಒಡಂಬಡಿಕೆಯಾಗಿರುವ ಬಗ್ಗೆ ಸಂಯೋಜಕರು, ಇವರ ಹೆಸರಿನಲ್ಲಿ ಕಾರ್ಪೋರೇಷನ್ ಬ್ಯಾಂಕ್, ಸರಸ್ವತಿಪುರಂ, ಮೈಸೂರು ಇವರಲ್ಲಿ ಉಳಿತಾಯ ಖಾತೆ ತೆರೆಯಲಾಗಿದ್ದು (ಖಾತೆ ಸಂ. 1082) ವಿಶ್ವವಿದ್ಯಾನಿಲಯ ಆದೇಶ ಸಂಖ್ಯೆ: No/UOMCP/21/2017-18 dated 22nd August 2017 ಮತ್ತು No/UOMCP/43/2017-18, dated 1st December 2017 ಗಳ ಆದೇಶದನ್ವಯ, ಸದರಿ ಖಾತೆಯನ್ನು ಮುಕ್ತಾಯಗೊಳಿಸಿ, ಉಳಿದ ಮೊತ್ತ ರೂ.6,27,17,360.50/– (ಡಿ.ಡಿ.ಸಂ.577255 ದಿ. 14.11.2017)ಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾನಿಲಯ ಆವರಣ ಶಾಖೆಯಲ್ಲಿ **"UNIVERSIRTY OF MYSORE CHINESE PROGRAMME (UOMCP) FINANCE OFFICER UNIVERSITY OF MYSORE, MYSORE"** ಈ ಹೆಸರಿನಲ್ಲಿ ಖಾತೆಯನ್ನು ತೆರೆದು ದಿನಾಂಕ 04–12–2017 ರಂದು ಜಮಾ ಮಾಡಲಾಗಿದ್ದು (ಖಾತೆ ಸಂಖ್ಯೆ: 37341463286) ಹಾಗೂ2017–18ನೇ ಸಾಲಿನ ಈ ಯೋಜನೆಯ ಆಯವ್ಯಯ ಅಂದಾಜಿನ ಅಗತ್ಯ ವೆಚ್ಚ ಶೀರ್ಷಿಕೆಗಳಲ್ಲಿ ಹೊಸ ವೆಚ್ಚ ಶೀರ್ಷಿಕೆಗಳನ್ನು ಅಳವಡಿಸುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.

**2018/1.19**

98ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆಯಲು ಗಣ್ಯರ ಹೆಸರುಗಳನ್ನು ಶಿಫಾರಸ್ಸು ಮಾಡುವ ಬಗ್ಗೆ.

**ತೀರ್ಮಾನ**

ಮೈಸೂರು ವಿಶ್ವವಿದ್ಯಾನಿಲಯದ 98ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಗಣ್ಯರುಗಳ ಹೆಸರುಗಳನ್ನು ನಿವೃತ್ತ ಕುಲಪತಿಗಳ/ ನಿವೃತ್ತ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ/ ನಿವೃತ್ತ ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಚಿಸಲ್ಪಡುವ ಪರಿಶೀಲನಾ ಸಮಿತಿಯು ಗೌರವ ಡಾಕ್ಟರೇಟ್ ಪದವಿಗಾಗಿ ಆಯ್ಕೆ ಮಾಡುವ ಸಂಬಂಧ ಈ ಕೆಳಕಂಡ ಗಣ್ಯರ ಹೆಸರುಗಳನ್ನು ಪರಿಶೀಲನಾ ಸಮಿತಿಗೆ ಶಿಫಾರಸ್ಸು ಮಾಡಲು ಸಿಂಡಿಕೇಟ್ ತೀರ್ಮಾನಿಸಿತು.

1. ಶ್ರೀ ಸಿದ್ದರಾಮಯ್ಯನವರು, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

| | |
|---|---|
| | 2. ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿರವರು, ಸುತ್ತೂರು ಕ್ಷೇತ್ರ<br>3. ಡಾ. ಕಿರಣ್‌ಕುಮಾರ್, ಅಧ್ಯಕ್ಷರು, ಭಾರತೀಯ ಬಾಹ್ಯಾಕಾಶ ಸಂಸ್ಥೆ<br>4. ಡಾ. ನಿಸಾರ್ ಅಹಮದ್<br>5. ಡಾ. ಎನ್.ಆರ್.ಮಾಧವ ಮೆನನ್<br>6. ಶ್ರೀ ಎಸ್.ಸಿ.ನಾಗನಂದ ಸ್ವಾಮೀಜಿ<br>7. ಡಾ.ಅನಿಲ್,* ಪದ್ಮ ವಿಭೂಷಣ್ ಪ್ರಶಸ್ತಿ ವಿಜೇತರು * ಕಾಕೋಡ್ಕರ್<br>8. ಶ್ರೀ ಅಣ್ಣಾ ಅಜಾರೆ<br>9. ಶ್ರೀ ಎಂ. ನಂಜುಂಡಸ್ವಾಮಿ. ಐ.ಪಿ.ಎಸ್. ಅಧಿಕಾರಿ<br>10. ಶ್ರೀಮತಿ ರತ್ನಪ್ರಭಾ, ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ<br>11. ಶ್ರೀಮತಿ ಸಿಂಧೂತಾಯಿ ಸಪ್ಕಾಳ್, 2016ರ ಕರ್ನಾಟಕ ರಾಜ್ಯ ಸರ್ಕಾರದ ಶ್ರೀ ಬಸವಶ್ರೀ ಪ್ರಶಸ್ತಿ ಪುರಸ್ಕೃತರು<br>12. ಶ್ರೀ ವೆಂಕಟೇಶ್ ಪ್ರಸಾದ್, ಕ್ರಿಕೆಟ್ ಕ್ರೀಡಾಪಟು<br>13. ಶ್ರೀಮತಿ ಸಾಲುಮರ ತಿಮ್ಮಕ್ಕ, ಸಮಾಜ ಸೇವೆ<br>14. ಶ್ರೀ ಡಿ.ಎಸ್.ನಾಗಾಭರಣ, ಖ್ಯಾತ ಚಲನಚಿತ್ರ ನಿರ್ದೇಶಕರು ಮತ್ತು ರಂಗಭೂಮಿ ಕಲಾವಿದರು<br>15. ಶ್ರೀ ಎಸ್.ವಿ.ಎಸ್.ಸುಬ್ರಮಣ್ಯಗುಪ್ತ, ಖ್ಯಾತ ಉದ್ಯಮಿಗಳು |
| **2018/1.20** | ಮೈಸೂರು ವಿಶ್ವವಿದ್ಯಾನಿಲಯ ಮತ್ತು Mysore Central Academy of Arts & Multimedia {A Unit of Delta Foundation(R)}, Mysore. ಇವುಗಳ ನಡುವೆ ಒಡಂಬಡಿಕೆ ಒಳಪಟ್ಟಿರುವ ಬಗ್ಗೆ. |
| **ತೀರ್ಮಾನ** | Mysore Central Academy of Arts & Multimedia {A Unit of Delta Foundation(R)}, Mysore ಈ ಸಂಸ್ಥೆಯು The University of Mysore – Recognition of certain Institutions for Specified Studies/ Specialized and Research Statutes 2008"ರ ಅಡಿ ಮೈಸೂರು ವಿಶ್ವವಿದ್ಯಾನಿಲಯದೊಂದಿಗೆ ಒಡಂಬಡಿಕೆಗೆ ಒಳಪಟ್ಟು PG Diploma in Wellness Science ಕೋರ್ಸ್‌ನ್ನು ಪ್ರಾರಂಭಿಸುವ ಸಂಬಂಧ ಒಡಂಬಡಿಕೆಗೆ ಸಹಿಹಾಕಿರುವ ಕ್ರಮವನ್ನು ಸಿಂಡಿಕೇಟ್ ಸ್ಥಿರೀಕರಿಸಿತು. |
| **2018/1.21** | Visit of Prof. C. Basavaraju, Vice Chancellor (I/C), University of Mysore to Huanghuai University, Henan Province, Kaiyuan Road, Zhumadian, Henan 46300, China. |
| **Decision** | The Syndicate perused the invitation letter received from Prof. Wang Dongyun, Vice President of Huanghuai University, China. In his letter he has invited Prof. C.Basavaraju, Vice Chancellor I/C, University of Mysore to visit Huanghuai University, Henna Province, China from January 15, 2018 to Janu'17, 2018 to review the academic collaboration and further extension of the programme for new Collaboration.<br>As the host University, i.e., Huanghuai University, China has informed that the travel cost, accommodation and local hospitality would be borne by them, **the Syndicate resolved to permit** Prof. C.Basavaraju, Vice-Chancellor I/C, University of Mysore to visit Huanghuai University, Henna Province, China during February/March 2018 instead of from Jan., 15, 2018 to Jan. 17, 2018 without any financial Committement on the part of the University of Mysore. |
| **2018/1.22** | ಡಾ. ಚಂದಾವರ ವಿದ್ಯಾ ಆರ್. ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು ಇವರ ವಿರುದ್ಧ ನಡೆದ ಇಲಾಖಾ ವಿಚಾರಣೆಯ ವರದಿಗೆ ನೀಡಿರುವ ವಿವರಣೆಯ ಬಗ್ಗೆ. |
| **ತೀರ್ಮಾನ** | ದಿನಾಂಕ 27-10-2017 ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದನುಸಾರ, ಡಾ. ಚಂದಾವರ ವಿದ್ಯಾ ಆರ್ ಅವರಿಗೆ ಅವರ ವಿರುದ್ಧ ಇಲಾಖಾ ವಿಚಾರಣೆಯ ವರದಿಗೆ ವಿವರಣೆಯನ್ನು ಸಲ್ಲಿಸುವಂತೆ ಸೂಚಿಸಿದ್ದರ ಹಿನ್ನೆಯಲ್ಲಿ ಸದರಿರವರು ದಿನಾಂಕ 01-12-2017 ರಂದು ಇಲಾಖಾ ವಿಚಾರಣೆಯ ವರದಿಯ ಬಗ್ಗೆ ಸಲ್ಲಿಸಿದ್ದ ವಿವರಣೆಯನ್ನು ಹಾಗೂ ಈ ವಿವರಣೆಯ ಸಂಬಂಧ ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯವನ್ನು |

| | |
|---|---|
| | ಪರಿಶೀಲಿಸಿದ ಸಭೆಯು ಡಾ. ಚಂದಾವರ ವಿದ್ಯಾ ಆರ್. ಸಹ ಪ್ರಾಧ್ಯಾಪಕರು, ಯುವರಾಜ ಕಾಲೇಜು, ಇವರು ನೀಡಿರುವ ಉತ್ತರವು ಸಮಂಜಸವಾಗಿದೆ ಎಂದು ತೀರ್ಮಾನಿಸಿ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/1.23** | ಘಟಿಕೋತ್ಸವದ ವಿವಿಧ ಕೆಲಸಗಳಿಗೆ ಸಂಭಾವನೆ ನೀಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದಲ್ಲಿ ಜರುಗುವ ವಾರ್ಷಿಕ ಘಟಿಕೋತ್ಸವಗಳಲ್ಲಿ ವಿವಿಧ ಕೆಲಸಗಳಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಕಾರ್ಯನಿರ್ವಾಹಕರುಗಳಿಗೆ ಅವರು ನಿರ್ವಹಿಸುವ ಕಾರ್ಯಗಳಿಗೆ ಅನುಗುಣವಾಗಿ 03,06.2005ರ ಸಿಂಡಿಕೇಟ್ ನಿರ್ಣಯದ ಅನುಸಾರ ಸಂಭಾವನೆಯನ್ನು ನೀಡಲಾಗುತ್ತಿದ್ದುದ್ದನ್ನು ಪರೀಶೀಲಿಸಿದ ಸಿಂಡಿಕೇಟ್ ಪ್ರಸ್ತುತ ದಿನಗಳಲ್ಲಿ ತಾಂತ್ರಿಕವಾಗಿ ಘಟಿಕೋತ್ಸವದ ವಿವಿಧ ಕೆಲಸಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿರುವುದರಿಂದ ಈ ಕೆಳಕಂಡ ಕಾರ್ಯಗಳಿಗೆ ಸಂಭಾವನೆ ದರಗಳನ್ನು ಮಾರ್ಪಡಿಸಲು ಮಂಡಿಸಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು. |

| ಹಿಂದೆ ನಿರ್ವಹಿಸುತ್ತಿದ್ದ ಕೆಲಸಗಳ ವಿವರ | ರೂ.ಪೈ | ಪ್ರಸ್ತುತವಾಗಿ ನಿರ್ವಹಿಸುತ್ತಿರುವ ಕೆಲಸಗಳ ವಿವರ | ರೂ. ಪೈ |
|---|---|---|---|
| ಪದವಿ ಪತ್ರಗಳಲ್ಲಿ ಅಭ್ಯರ್ಥಿಗಳ ವಿವರ–ಗಳನ್ನು ಗಣಕ ಯಂತ್ರದಲ್ಲಿ ಸಿದ್ದಪಡಿಸಿ ಮುದ್ರಿಸಲು ಪ್ರತಿ ಪದವಿ ಪತ್ರಕ್ಕೆ | 00–25 | ಪದವಿ ಪತ್ರಗಳಲ್ಲಿ ಅಭ್ಯರ್ಥಿಗಳ ವಿವಿರಗಳನ್ನು ಗಣಕ ಯಂತ್ರದಲ್ಲಿ ಸಿದ್ದಪಡಿಸಿ ಮುದ್ರಿಸಲು ಪ್ರತಿ ಪದವಿ ಪತ್ರಕ್ಕೆ | 00–25 |
| ಪದವಿ ಪತ್ರದ ಮೇಲೆ ಹಾಲೋಗ್ರಾಂ ಅಂಟಿಸಲು ಪ್ರತಿ ಪದವಿ ಪತ್ರಕ್ಕೆ | 00–15 | ವಿಶ್ವವಿದ್ಯಾನಿಲಯದ ಸ್ವಾಯತ್ತ ರಹಿತ ಕಾಲೇಜುಗಳಿಗೆ ಗಣಕಯಂತ್ರದಲ್ಲೇ ಕ್ಯು.ಆರ್.ಕೋಡ್‌ನೊಂದಿಗೆ ಮುದ್ರಿತ–ವಾಗುವುದರಿಂದ ಸ್ವಾಯತ್ತ ಕಾಲೇಜು–ಗಳಿಗೆ ಮಾತ್ರ ಹಾಲೋಗ್ರಾಂ ಅಂಟಿಸಲು ಪ್ರತಿ ಪದವಿ ಪತ್ರಕ್ಕೆ | 00–15 |
| ಪದ್ಧವಿ ಪತ್ರಕ್ಕೆ ಬರುವ ಅರ್ಜಿಗಳನ್ನು ನೊಂದಾಯಿಸಲು ಪ್ರತಿ ಅರ್ಜಿಗೆ (ಸ್ನಾತಕೋತ್ತರ ಪದವಿ ಅರ್ಜಿಗಳು ಮಾತ್ರ) | 00–40 | ಪದವಿ ಪತ್ರಕ್ಕೆ ಬರುವ ಅರ್ಜಿಗಳನ್ನು ಪರಿಶೀಲಿಸಿ ನೊಂದಾಯಿಸಲು ಪ್ರತಿ ಪದವಿ ಪತ್ರಕ್ಕೆ ಮತ್ತು ಪದವಿ ಪ್ರಮಾಣ ಪತ್ರವನ್ನು ಮುದ್ರಿಸಿ ರವಾನಿಸಲು | 1–00 |
| ಪದವಿ ಪತ್ರಗಳ ಪರಿಶೀಲನೆ ಕಾರ್ಯಕ್ಕೆ ಪ್ರತಿ ಪದವಿ ಪತ್ರಕ್ಕೆ | 00–75 | | |
| ಪದಕ ಬಹುಮಾನ ಪ್ರಶಸ್ತಿ ಪತ್ರಗಳನ್ನು (ಇಂಗ್ಲೀಷ್ ಮತ್ತು ಕನ್ನಡದಲ್ಲಿ) ಬರೆಯಲು ಪ್ರತಿ ಪತ್ರಕ್ಕೆ | 05–00 | ಗಣಕೀಕೃತಗೊಳಿಸಲಾಗಿದೆ. ಪ್ರಶಸ್ತಿ ಪತ್ರಗಳಿಗೆ ತಾಂತ್ರಿಕವಾಗಿ ಮಾಹಿತಿಯನ್ನು ನಮೂದಿಸಿ ಮುದ್ರಿಸಲು | 2–00 |

| | |
|---|---|
| **2018/1.24** | 2017–2018ನೇ ಸಾಲಿನ ಆಯವ್ಯಯ ಅಂದಾಜುಗಳ ಅಗತ್ಯ ವೆಚ್ಚ ಶೀರ್ಷಿಕೆಗಳಲ್ಲಿ ಮರುಹೊಂದಾಣಿಕೆ (Re-appropriation) ಮತ್ತು ಹೊಸ ವೆಚ್ಚ ಶಿರ್ಷಿಕೆಗಳನ್ನು ಅಳವಡಿಸುವ ಬಗ್ಗೆ |
| **ತೀರ್ಮಾನ** | 2017–18ನೇ ಸಾಲಿನ ಆಯವ್ಯಯ ಅಂದಾಜುಗಳ ವೆಚ್ಚಶೀರ್ಷಿಕೆಗಳಲ್ಲಿ ಈ ಕೆಳಕಂಡಂತೆ ಅಗತ್ಯ ವೆಚ್ಚ ಶೀರ್ಷಿಕೆಗಳಲ್ಲಿ ರೂ. 1,74,00,000/– ಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು ಹಾಗೂ 2017–18ನೇ ಸಾಲಿಗೆ ಸರ್ಕಾರವು ಖಜಾನೆ–2ರಲ್ಲಿ ರೂ.4.00 ಕೋಟಿಗಳನ್ನು ಆಯವ್ಯಯ ಅಂದಾಜಿನಲ್ಲಿ ನಿಗಧಿಪಡಿಸಿದ್ದು, ಈವರೆಗೆ ಬಿಡುಗಡೆಯಾಗಿರುವ ರೂ.2.00 ಕೋಟಿಗಳನ್ನು ಸಾಮಾನ್ಯ ರೆವಿನ್ಯೂ ಖಾತೆಗೆ ಜಮಾಮಾಡಿಕೊಂಡಿರುವುದನ್ನು ಗಮನಿಸಿದ ಸಿಂಡಿಕೇಟ್ ಇನ್ನು ಉಳಿದ ರೂ.2.00 ಕೋಟಿಗಳು ಬಿಡುಗಡೆಯಾದ ನಂತರ ಸಾಮಾನ್ಯ ರೆವಿನ್ಯೂ ಖಾತೆಗೆ ಜಮಾ ಮಾಡಿಕೊಂಡು ಈ ಸಂಬಂಧದ ವೆಚ್ಚ ಭರಿಸಲು ಪ್ರತ್ಯೇಕ ವೆಚ್ಚ ಶೀರ್ಷಿಕೆಯನ್ನು ನಿಗಧಿಪಡಿಸಿಕೊಳ್ಳಲಾಗುವ ವಿಷಯವನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| | (table below) |

| ಕ್ರ ಸಂ | ವಿಭಾಗ/ ಸಂಸ್ಥೆ | ಲೆಕ್ಕ ಶೀರ್ಷಿಕೆ ವಿವರ | 2017-18ರ ಆಯವ್ಯಯ ಅಂದಾಜು (ರೂ) | 2017-18ರ ಪರಿಷ್ಕೃತ ಆಯವ್ಯಯ ಅಂದಾಜು (ರೂ) | ಹೆಚ್ಚುವರಿ (ರೂ) |
|---|---|---|---|---|---|
| 1 | ಹಣಕಾಸು ಶಾಖೆ | 117-ಎಟಿಯು/ ಸಿಎಯು ಗೆ ವಂತಿಕೆ | 5,00,000-00 | 9,00,000-00 | 4,00,000-00 |
| 2 | ಹಣಕಾಸು ಶಾಖೆ | 189 – ಇತರೆ ವೆಚ್ಚ | 30,00,000-00 | 1,50,00,000-00 | 1,20,00,000-00 |
| 3 | ಹಣಕಾಸು ಶಾಖೆ | 300-ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳು | ------ | 50,00,000-00 | 50,00,000-00 |
| | | | | ಒಟ್ಟು ರೂ. | **1,74,00,000-00** |

| | |
|---|---|
| **2018/1.25** | ಮೈಸೂರು ವಿಶ್ವವಿದ್ಯಾನಿಲಯದ 2018-19ನೇ ಸಾಲಿನ ಯೋಜನೇತರ ಆಯವ್ಯಯ ಅಂದಾಜಿನ ವಿವರಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಬ್ಲಾಕ್ ಅನುದಾನ ಬಿಡುಗಡೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ. |
| **ತೀರ್ಮಾನ** | 2018-19ನೇ ಸಾಲಿಗೆ ವೇತನ ಭತ್ಯೆಗಳ ವೆಚ್ಚದಲ್ಲಿ ಭರ್ತಿಯಾಗುವ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳನ್ನು ಒಳಗೊಂಡಂತೆ ಲೆಕ್ಕಾಚಾರ ಮಾಡಲಾಗಿ ವೇತನ ಭತ್ಯೆಗಳು ರೂ.128,51,42,913/- ಮತ್ತು ಪಿಂಚಣಿ ವೆಚ್ಚ ರೂ.70,00,00,000/-ಗಳು ಒಟ್ಟಾರೆ ರೂ.198,51,42,913/- ವೆಚ್ಚ ಎಂದು ಅಂದಾಜಿಸಲಾಗಿದ್ದು, ಈ ಸಂಬಂಧ, ಸರ್ಕಾರಕ್ಕೆ 2018-19ನೇ ಸಾಲಿಗೆ ರೂ. 186,50,47,913/-ಗಳ ಬ್ಲಾಕ್ ಅನುದಾನ ಬಿಡುಗಡೆಗೆ ಪ್ರಸ್ತಾಪನೆ ಸಲ್ಲಿಸಿರುವ ವಿಷಯವನ್ನು ದಿನಾಂಕ 05-01-2018ರಂದು ನಡೆದ ಹಣಕಾಸು ಸಮಿತಿ ಸಭೆಯ ಮುಂದೆ ಮಂಡಿಸಿ ಒಪ್ಪಿಗೆ ಪಡೆದಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/1.26** | ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗಕ್ಕೆ ಹೊಸದಾಗಿ ಮೂರು ಹುದ್ದೆಗಳನ್ನು ಸೃಜಿಸುವಂತೆ ಮಾನ್ಯ ಸಿಂಡಿಕೇಟ್ ಸದಸ್ಯರು ಕೋರಿರುವ ಬಗ್ಗೆ. |
| **ತೀರ್ಮಾನ** | ಮಾನ್ಯ ಸಿಂಡಿಕೇಟ್ ಸದಸ್ಯರಾದ ಪ್ರೊ. ಡಿ.ನಂಜುಂಡಯ್ಯ, ಲಯನ್ ಹೆಚ್.ರಮೇಶ್, ಪ್ರೊ. ಕುಮಾರ್, ಶ್ರೀ ಎಂ.ಎಸ್.ಎಸ್.ಕುಮಾರ್, ಶ್ರೀಮತಿ ಶೃತಿ ತರುಣ್ ಗಿರಿ, ಶ್ರೀ ಮಹಮ್ಮದ್ ಅಬ್ದುಲ್ ಸಲಾಂ ಮತ್ತು ಶ್ರೀ ಜಗದೀಶ್ ಇವರುಗಳು ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗದಲ್ಲಿ ಕೆಲಸದ ಒತ್ತಡ ಹೆಚ್ಚಾಗಿರುವುದರಿಂದ ಈ ಕೆಳಕಂಡ ಮೂರು ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವಂತೆ ಸಲ್ಲಿಸಿರುವ ಮನವಿಯನ್ನು ಪರಿಶೀಲಿಸಲಾಗಿ, ಸದರಿ ವಿಭಾಗದಲ್ಲಿ ಹುದ್ದೆಗಳನ್ನು ಸೃಜಿಸುವ Technical Committee Report ಪಡೆದು ನಂತರ ಕ್ರಮ ಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/1.27** | ವಿಶ್ವವಿದ್ಯಾನಿಲಯದಲ್ಲಿ ಸೇವೆಯಲ್ಲಿರುವಾಗಲೇ ನಿಧನರಾದ ಉದ್ಯೋಗಿಯ ಕುಟುಂಬದ ಅವಲಂಬಿತರೊಬ್ಬರಿಗೆ ಅನುಕಂಪದ ಅಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ಮೃತರಾದ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ಮೃತರಾದ ದಿವಂಗತ ಶ್ರೀ ಗಣೇಶ್ ಎಂ. ನಿಲಯ ಸಹಾಯಕರು, ಸ್ನಾತಕೋತ್ತರ ಪುರುಷರ ವಿದ್ಯಾರ್ಥಿಬನಿಲಯ ಬ್ಲಾಕ್-2, ಮಾನಸಗಂಗೋತ್ರಿ, ಮೈಸೂರು ಅವರ ಮಗನಾದ ಶ್ರೀ ಎಂ.ಜಿ.ಮಣಿರಾಜ ರವರಿಗೆ ಅನುಕಂಪದ ಆಧಾರದ ಮೇಲೆ ಅವರ ವಿದ್ಯಾರ್ಹತೆಯನುಸಾರ ಪರಿಚಾರಕರ ಹುದ್ದೆಯಲ್ಲಿ ನೇಮಕಮಾಡಲು ಸಿಂಡಿಕೇಟ್ ತೀರ್ಮಾನಿಸಿತು. ನಿಲಯ ಸಹಾಯಕ |
| **2018/1.28** | ಡಾ. ಹೆಚ್.ನಂಜೇಗೌಡ, ನಿವೃತ್ತ ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ಅವರ ನಿವೃತ್ತಿ ವೇತನದ ಬಗ್ಗೆ. |

| | |
|---|---|
| | ಡಾ. ಹೆಚ್.ನಂಜೇಗೌಡ, ನಿವೃತ್ತ ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ಅವರ ನಿವೃತ್ತಿ ವೇತನದ ಬಗ್ಗೆ ಸಭೆಯು ಈ ಕೆಳಕಂಡ ಅಂಶಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು.<br>1. ಡಾ. ಹೆಚ್.ನಂಜೇಗೌಡ, ನಿವೃತ್ತ ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ಇವರ ವಿರುದ್ಧ, Department/Legal ವಿಚಾರಣೆ ಬಾಕಿಯಿರುವುದರಿಂದ, ಪ್ರಾವಿಜನಲ್ ಪಿಂಚಣಿ ಮಂಜೂರು ಮಾಡಿ ಪಾವತಿಸಲಾಗಿದ್ದು, ಹಾಗೂ ಗಳಿಕೆ ರಜೆ ನಗದೀಕರಣ ಮತ್ತು ಗುಂಪು ಯೋಜನೆ ಯೋಜನೆ ವಿಮಾ ಸೌಲಭ್ಯಗಳನ್ನು ಸಹ ಮಂಜೂರು ಮಾಡಿ ಪಾವತಿಸಲಾಗಿದೆ.<br>2. ಡಾ. ಹೆಚ್.ನಂಜೇಗೌಡ, ಇವರ ವಿರುದ್ದ ದಿನಾಂಕ 05-11-2016ರ ವಿ.ವಿ.ಆದೇಶದಲ್ಲಿ Department/Legal ವಿಚಾರಣೆ ಬಾಕಿಯಿರುವುದಾಗಿ ತಿಳಿಸಿರುವುದರಿಂದ, ಕೆ.ಸಿ.ಎಸ್.ಆರ್. ನಿಯಮ 214(ಎ) ಮತ್ತು ನಿಯಮ 377ರ ಪ್ರಕಾರ ಪೂರ್ಣ ಪಿಂಚಣಿ ಸೌಲಭ್ಯಗಳನ್ನು ಸದರಿರವರಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ. |
| ತೀರ್ಮಾನ | ಡಾ. ಹೆಚ್.ನಂಜೇಗೌಡ, ನಿವೃತ್ತ ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ಇವರಿಗೆ ಗಳಿಕೆ ರಜೆ ನಗದೀಕರಣ ಗುಂಪು ವಿಮಾ ಯೋಜನೆ ಸೌಲಭ್ಯ ಮತ್ತು Provisional Pension ಸೌಲಭ್ಯಗಳನ್ನು ಈಗಾಗಲೇ ನೀಡಿರುವುದನ್ನು ಗಮನಿಸಿದ ಸಿಂಡಿಕೇಟ್ ಇವರ ವಿರುದ್ದ Department/Legal ವಿಚಾರಣೆಗಳು ಬಾಕಿಯಿರುವುದರಿಂದ ಕೆ.ಸಿ.ಎಸ್.ಆರ್. ನಿಯಮ 214(ಎ) ಮತ್ತು ನಿಯಮ 377ರ ಪ್ರಕಾರ ಪೂರ್ಣವಾಗಿ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಲು ಅವಕಾಶವಿಲ್ಲದಿರುವುದರಿಂದ ಸದರಿಯವರು ನಿವೃತ್ತಿ ವೇತನ ಬಿಡುಗಡೆ ಬಗ್ಗೆ ಸಲ್ಲಿಸಿರುವ ಮನವಿಯನ್ನು ಪುರಸ್ಕರಿಸದಿರಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/1.29** | 1. 2017-18ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. 2) 2017-18ನೇ ಶೈಕ್ಷಣಿಕ ಸಾಲಿನ ಹಾಸನದ ಸರ್ಕಾರಿ ಕಲಾ ಸ್ವಾಯತ್ತ ಕಾಲೇಜಿಗೆ ಹೆಸರನ್ನು 'ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು' ಎಂಬುದಾಗಿ ಬದಲಾವಣೆ ಮಾಡುವ ಬಗ್ಗೆ ಪರಾಮರ್ಶನ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. 3) 2017-18ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. 4) 2017-18ನೇ ಶೈಕ್ಷಣಿಕ ಸಾಲಿನ ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. 5) 2017-18ನೇ ಶೈಕ್ಷಣಿಕ ಸಾಲಿನ ಮಂಡ್ಯದ ಮಹಿಳಾ ಸರ್ಕಾರಿ ಸ್ವಾಯತ್ತತಾ ಕಾಲೇಜಿಗೆ ಪರಾಮರ್ಶನ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| ತೀರ್ಮಾನ | 2017-18ನೇ ಶೈಕ್ಷಣಿಕ ಸಾಲಿಗೆ, 1) ಹಾಸನದ ಸರ್ಕಾರಿ ವಿಜ್ಞಾನ ಸ್ವಾಯತ್ತ ಕಾಲೇಜು, 2) ಹಾಸನದ ಸರ್ಕಾರಿ ಕಲಾ ಸ್ವಾಯತ್ತ ಕಾಲೇಜು, 3) ಮೈಸೂರಿನ ಬಿ.ಎನ್.ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, 4) ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಮಹಿಳಾ ಕಾಲೇಜು, 5) ಮಂಡ್ಯದ ಮಹಿಳಾ ಸರ್ಕಾರಿ ಕಾಲೇಜುಗಳಿಗೆ ಸ್ವಾಯತ್ತತೆಯನ್ನು ಮುಂದುವರೆಸುವ ಸಂಬಂಧ ಹಾಗೂ ಹಾಸನದ ಸರ್ಕಾರಿ ಕಲಾ ಸ್ವಾಯತ್ತ ಕಾಲೇಜಿನ ಹೆಸರನ್ನು 'ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು' ಎಂಬುದಾಗಿ ಬದಲಾಯಿಸುವ ಸಂಬಂಧ, ಪರಾಮರ್ಶನ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಅನುಮೋದಿಸಲಾಯಿತು. |
| **2018/1.30** | ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು, ಇವರು ಮೇ/ಜೂನ್-2017ರ ಪರೀಕ್ಷ ಕಾರ್ಯಕ್ಕೆ ಒದಗಿಸಿದ್ದ ಬಾಡಿಗೆ ವಾಹನ ಹುಂಡಿಯನ್ನು ಪಾವತಿಸುವ ಬಗ್ಗೆ ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ. |

**ತೀರ್ಮಾನ**

ಮೆ. ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು ರವರು ಮೇ/ಜೂನ್–2017ರ ಪರೀಕ್ಷಾ ಕಾರ್ಯಗಳಿಗೆ ಒದಗಿಸಿದ್ದ ವಾಹನಗಳ ಬಾಡಿಗೆ ಹುಂಡಿಯ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ ಸಂ. | ಕಾರ್ಯ ನಿರ್ವಹಿಸಿರುವುದು | ಮೊತ್ತ ರೂ.ಗಳಲ್ಲಿ |
|---|---|---|
| 1 | ವಿಶ್ವವಿದ್ಯಾನಿಲಯ ವ್ಯಾಪ್ತಿಯ ಬೇರೆ ಬೇರೆ ಊರುಗಳ ಕಾಲೇಜುಗಳಿಗೆ ಮೊದಲ ಕಂತಿನ ಪ್ರಶ್ನೆಪತ್ರಿಕೆಯನ್ನು ವಿತರಿಸಿರುವ ವಾಹನಗಳ ಬಾಡಿಗೆ ಮೊತ್ತ | 22,188–00 |
| 2 | ಪರೀಕ್ಷಾ ಕಾರ್ಯಗಳಿಗೆ ಜಾಗೃತದಳದ ಸದಸ್ಯರಿಗೆ ಒದಗಿಸಿರುವ ವಾಹನಗಳ ಬಾಡಿಗೆ ಮೊತ್ತ | 5,39,682–00 |
| 3 | ವಿಶ್ವವಿದ್ಯಾನಿಲಯ ವ್ಯಾಪ್ತಿಯ ಬೇರೆ ಬೇರೆ ಊರುಗಳ ಕಾಲೇಜುಗಳಿಗೆ ಎರಡನೇ ಕಂತಿನ ಪ್ರಶ್ನೆ ಪತ್ರಿಕೆಯನ್ನು ವಿತರಿಸಿರುವ ವಾಹನಗಳ ಬಾಡಿಗೆ ಮೊತ್ತ | 1,77,224–00 |
| 4 | ಪರೀಕ್ಷಾ ಕಾರ್ಯಗಳಿಗೆ ಜಾಗೃತದಳದ ಸದಸ್ಯರಿಗೆ ಒದಗಿಸಿರುವ ವಾಹನಗಳ ಬಾಡಿಗೆ ಮೊತ್ತ | 16,864–00 |
| | **ಒಟ್ಟು ರೂ.** | **7,55,958–00** |

ಮೇ/ಜೂನ್ 2017ರ ಪರೀಕ್ಷಾ ಕಾರ್ಯಗಳಿಗೆ ಒದಗಿಸಿರುವ ಬಾಡಿಗೆ ವಾಹನಗಳ ಒಟ್ಟು ಮೊತ್ತ ರೂ.7,55,958/–ಗಳಾಗಿದ್ದು, ಬಾಕಿ ಇರುವ ಸದರಿ ಮೊತ್ತವನ್ನು ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ ಪರೀಕ್ಷಾ ಕೆಲಸಕಾರ್ಯಗಳನ್ನು ಸಕಾಲದಲ್ಲಿ ನಿರ್ವಹಿಸಲೇಬೇಕಾಗಿದ್ದುದ್ದರಿಂದ ಈಗಾಗಲೇ ಪಾರದರ್ಶಕ ನಿಯಮಾನುಸಾರ ವಾಹನಗಳನ್ನು ನೀಡುತ್ತಿದ್ದ ಮೆ: ಕಾವೇರಿ ಟೂರ್ಸ್ ಅಂಡ್ ಟ್ರಾವೆಲ್ಸ್, ಮೈಸೂರು ಇವರಿಗೆ ಈಗಾಗಲೇ ಮಾಡಿಕೊಂಡಿರುವ ಒಪ್ಪಂದಗಳನ್ವಯದ ದರಗಳಂತೆ ಪಾವತಿಸಲು ಹಾಗೂ ಇನ್ನೂ ಮುಂದೆ ಸಕಾಲದಲ್ಲಿ ಪಾರದರ್ಶಕ ನಿಯಮಾನುಸಾರ ಇ–ಟೆಂಡರ್ ಅನ್ವಯ ಕ್ರಮಕೈಗೊಳ್ಳುವಂತೆ ಸಿಂಡಿಕೇಟ್ ತೀರ್ಮಾನಿಸಿತು.

**2018/1.31**

UG ಮತ್ತು PG ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ U.G.C.ಅಧ್ಯಾಪಕರುಗಳಿಗೆ ದಿನಭತ್ಯೆಯನ್ನು ಹೆಚ್ಚಿಸುವ ಬಗ್ಗೆ.

**ತೀರ್ಮಾನ**

ವಿವಿಧ ಪರೀಕ್ಷಾ ಮಂಡಳಿ ಅಧ್ಯಕ್ಷರುಗಳ ಮನವಿ ಮೇರೆಗೆ, ದಿನಾಂಕ 15–12–2017 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಯುಜಿಸಿ ವೇತನ ಪಡೆಯುತ್ತಿರುವ ಯುಜಿ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ ಹೊರಗಿನ ಅಧ್ಯಾಪಕರುಗಳಿಗೆ ರೂ. 800/– ಹಾಗೂ ಸ್ಥಳೀಯ ಅಧ್ಯಾಪಕರುಗಳಿಗೆ ರೂ.400/– ಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಿರುವಂತೆ, ಈ ಆದೇಶವು ಯುಜಿ, ಪಿ.ಜಿ ಉತ್ತರ ಪತ್ರಿಕೆಗಳ ಮೌಲ್ಯ ಮಾಪಕರಿಬ್ಬರಿಗೂ ಅನ್ವಯವಾಗುವುದರಿಂದ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲು ಸಿಂಡಿಕೇಟ್ ಅನುಮೋದಿಸಿತು.

| | | | |
|---|---|---|---|
| 1 | ಸ್ನಾತಕ/ ಸ್ನಾತಕೋತ್ತರ ಪದವಿ/ ಡಿಪ್ಲೊಮ/ ಪಿ.ಜಿ.ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ ಯುಜಿಸಿ ವೇತನ ಪಡೆಯುತ್ತಿರುವ ಮೌಲ್ಯಮಾಪಕರುಗಳಿಗೆ | ಬಾಹ್ಯ (ಹೊರಗಿನ) ಮೌಲ್ಯ ಮಾಪಕರುಗಳಿಗೆ ದಿನಕ್ಕೆ ರೂ.800/– (ದಿನಭತ್ಯೆ) | ಆಂತರಿಕ (ಸ್ಥಳೀಯ) ಮೌಲ್ಯಮಾಪಕರುಗಳಿಗೆ ರೂ.400/– (ಸ್ಥಳೀಯಭತ್ಯೆ) |

**2018/1.32**

ಬಿ.ಎಡ್. ಕಾಲೇಜುಗಳಿಗೆ ಭೇಟಿ ನೀಡುವ Monitoring Academics and Assessment Committee (MAAC) ಸಮಿತಿಯ ಸದಸ್ಯರುಗಳಿಗೆ ವಿವಿಧ ಭತ್ಯೆಗಳ ಸೌಲಭ್ಯ ಕುರಿತು

**ತೀರ್ಮಾನ**

ಬಿ.ಎಡ್. ಕಾಲೇಜುಗಳಿಗೆ ಭೇಟಿ ನೀಡುವ Monitoring Academics and Assessment Committee (MAAC) ಸಮಿತಿಯ ಸದಸ್ಯರ ಕಾರ್ಯವೈಖರಿಯು ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು ಅಭಿವೃದ್ಧಿ ಮಂಡಳಿಯ Local Inquiry Committee ಸದಸ್ಯರ ಕಾರ್ಯವೈಖರಿ ಮಾದರಿಯಲ್ಲಿಯೇ ಇದ್ದು, ವಿಶೇಷವಾಗಿ ಬಿ.ಎಡ್. ವ್ಯಾಸಂಗದ ಸಮಗ್ರ ಗುಣಮಟ್ಟ ಪರಿಶೀಲನೆಗೆ ಹೆಚ್ಚು ಮಹತ್ವ ನೀಡಲಾಗುತ್ತದೆ. ಆದುದರಿಂದ LIC ಗೆ ನೀಡುವ ಮಾದರಿಯಲ್ಲ (MAAC) ಸದಸ್ಯರುಗಳಿಗೆ 'ಸಭಾ ಭತ್ಯೆ' 'ಹಾಲ್ಟಿಂಗ್ ಭತ್ಯೆ' ಹಾಗೂ 'ಪ್ರಯಾಣ ಭತ್ಯೆ'ಗೆ ಸಂಬಂಧಿಸಿದಂತೆ Local Inquiry Committee ಸದಸ್ಯರಿಗೆ ನೀಡಲಾಗುವ ಸಂಭಾವನೆಯಂತೆ ನಿಗಧಿಪಡಿಸಿ, ಸದರಿ ಮೊತ್ತವನ್ನು ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದಿಂದ (Fees Structure) ಭರಿಸಲು ಸಿಂಡಿಕೇಟ್ ತೀರ್ಮಾನಿಸಿತು.

| | |
|---|---|
| **2018/1.33** | ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಭೋಜನ ವ್ಯವಸ್ಥೆಯನ್ನು ಕಲ್ಪಿಸುವ ಸಂಬಂಧ ದಿನಸಿ ಪದಾರ್ಥಗಳ ಖರೀದಿ, ಪಾತ್ರೆ/ಪರಿಕರಗಳ ಖರೀದಿ ಮತ್ತು ಅಡುಗೆ ಸಿಬ್ಬಂದಿಯ ಸೇವೆಯನ್ನು ಪಡೆಯಲು ಕರೆಯಲಾಗಿದ್ದ ಇ-ಟೆಂಡರ್‌ಗಳನ್ನು ಕುರಿತು. |
| **ತೀರ್ಮಾನ** | 2017-18ನೇ ಶೈಕ್ಷಣಿಕ ಸಾಲಿನ ಎರಡನೇ ಚಾತುರ್ಮಾಸದ ಪ್ರಾರಂಭದಿಂದ ಶಿಕ್ಷಕ ಸಲಹೆಗಾರರ ನೇತೃತ್ವದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಭೋಜನ ವ್ಯವಸ್ಥೆಯನ್ನು ಕಲ್ಪಿಸುವ ಸಂಬಂಧ, ದಿನಸಿ ಪದಾರ್ಥಗಳ ಖರೀದಿ, ಪಾತ್ರೆ/ ಪರಿಕರಗಳ ಖರೀದಿ ಮತ್ತು ಅಡುಗೆ ಸಿಬ್ಬಂದಿಯ ಸೇವೆಯನ್ನು ಪಡೆಯಲು ಟೆಂಡರ್ ಅಂಗೀಕಾರ ಸಮಿತಿ ಸಭೆಯ ತೀರ್ಮಾನದಂತೆ, ಬಿಡ್‌ದಾರರ ತುಲನಾತ್ಮಕ ದರಪಟ್ಟಿಯಲ್ಲಿ ಒಟ್ಟಾರೆ ಕಡಿಮೆ ಮೊತ್ತವನ್ನು ನಮೂದಿಸಿರುವ ಈ ಕೆಳಕಂಡ ಬಿಡ್‌ದಾರರಿಗೆ ಆದೇಶ ನೀಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು.<br><br>1. ಮೆ: ಪ್ರದ್ಯುಮ್ನ ಎಂಟರ್‌ಪ್ರೈಸಸ್, ನಂ.10, ಸುಭೀಕ್ಷಾ, ಕನಕದಾಸ ನಗರ, ಕೌಟಿಲ್ಯ ಶಾಲೆಯ ಹತ್ತಿರ, ದಟ್ಟಗಳ್ಳಿ, ಮೈಸೂರು<br>2. ಮೆ: ವಿನಾಯಕ ಎಂಟರ್‌ಪ್ರೈಸಸ್, ನಂ. 1788/16, ಫಾರೆಸ್ಟ್ ನರ್ಸರಿ ರಸ್ತೆ, ಹೌಸಿಂಗ್ ಬೋರ್ಡ್, ಚಾಮರಾಜನಗರ.<br>3. ಮೆ: ಮನೋರಮಾ ಎಂಟರ್‌ಪ್ರೈಸಸ್, ನಂ.186/4, ಮೊದಲನೇ ಮಹಡಿ, ಜೆ.ಸಿ.ಕಾಂಪ್ಲೆಕ್ಸ್, ಸಿರೂರು ಪಾರ್ಕ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560020 |
| **2018/1.34** | ಮೈಸೂರು ವಿಶ್ವವಿದ್ಯಾನಿಲಯದ 1995-98ರಿಂದ 2012-13ನೇ ಸಾಲಿನವರೆಗಿನ ಮಹಾಲೇಖಪಾಲರ ಲೆಕ್ಕ ಪತ್ರಗಳ ವರದಿಗೆ ಅನುಪಾಲನಾ ವರದಿಯನ್ನು ಸಿಂಡಿಕೇಟ್ ಸಭೆ ಅನುಮೋದನೆಗಾಗಿ. |
| **ತೀರ್ಮಾನ** | 1995-98 ರಿಂದ 2012-13ನೇ ಸಾಲಿನವರೆಗಿನ ಮಹಾಲೇಖಪಾಲರ ಲೆಕ್ಕಪರಿಶೋಧನಾ ವರದಿಗಳಲ್ಲಿನ ಘೋಷ್ವಾರೆಯಲ್ಲಿ ವಿವರಿಸಿರುವ 21 ಕಂಡಿಕೆಗಳಿಗೆ ಅನುಪಾಲನ ವರದಿಯನ್ನು ಸಂಬಂಧಿಸಿದ ದಾಖಲೆಗಳ ಪ್ರತಿಗಳೊಡನೆ ಲೆಕ್ಕಪತ್ರಗಳ ವರದಿಗೆ ಸಿದ್ದಪಡಿಸಿ ಸಲ್ಲಿಸಿರುವ ಉತ್ತರಗಳಿಗೆ ಹಣಕಾಸು ಸಮಿತಿಯ ಒಪ್ಪಿಗೆ ಪಡೆದಿದ್ದು ಅವುಗಳನ್ನು ಪರಿಶೀಲಿಸಿದ ವಿಶ್ವವಿದ್ಯಾನಿಲಯವು ನೀಡಿರುವ ಅನುಪಾಲನಾ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/1.35** | ಶ್ರೀ ಗಣೇಶ, ನಿಲಯ ಸಹಾಯಕ, ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್-2, ಮಾನಸಗಂಗೋತ್ರಿ, ಮೈಸೂರು ಇವರ ಅನಧಿಕೃತ ಗೈರುಹಾಜರಾತಿಗೆ ಸಂಬಂಧಿಸಿದಂತೆ ಇವರ ವಿರುದ್ಧ ವಿಚಾರಣಾಧಿಕಾರಿಯವರು ವಿಚಾರಣೆಯನ್ನು ನಡೆಸಿ ಸಲ್ಲಿಸಿರುವ ವಿಚಾರಣಾ ವರದಿ. |
| **ತೀರ್ಮಾನ** | ಶ್ರೀ ಗಣೇಶ, ನಿಲಯ ಸಹಾಯಕ, ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್-2, ಮಾನಸಗಂಗೋತ್ರಿ, ಮೈಸೂರು ಇವರ ಅನಧಿಕೃತ ಗೈರುಹಾಜರಾತಿಗೆ ಸಂಬಂಧಿಸಿದಂತೆ, ಇವರ ವಿರುದ್ಧ ವಿಚಾರಣೆಯನ್ನು ನಡೆಸಲು ದಿ. 18-09-2017ರ ಸಿಂಡಿಕೇಟ್ ನಿರ್ಣಯದನುಸಾರ ವಿಚಾರಣಾಧಿಕಾರಿಯನ್ನಾಗಿ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರಾದ ಶ್ರೀ ಹೆಚ್.ಎಸ್.ರಾಮಣ್ಣ, ನಿವೃತ್ತ ನ್ಯಾಯಾಧೀಶರು ವಿಚಾರಣೆಯನ್ನು ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಿದ ಸಭೆಯು ಶ್ರೀ ಗಣೇಶರವರ ಅನಧಿಕೃತ ಗೈರುಹಾಜರಿ ಸಂಬಂಧ ಕೆ.ಸಿ.ಎಸ್.ಆರ್. ನಿಯಮದನ್ವಯ ಕ್ರಮಕೈಗೊಳ್ಳಲು ನಿರ್ಣಯಿಸಿತು. |
| **2018/1.36** | ಸಂಶೋಧನಾ ಮಾರ್ಗದರ್ಶಕರ ಮಾನ್ಯತೆ ಹಿಂಪಡೆದಿರುವ ಬಗ್ಗೆ. |
| **ತೀರ್ಮಾನ** | ಸಂಶೋಧನಾ ಮಾರ್ಗದರ್ಶಕರ ಮಾನ್ಯತೆ ಹಿಂಪಡೆದಿರುವ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು, ಯು.ಜಿ.ಸಿ.ಯ ನಿರ್ದೇಶನಾನುಸಾರ ವಿಶ್ವವಿದ್ಯಾನಿಲಯವು ಕ್ರಮ ವಹಿಸಿದ್ದು ಡಾ.ಪಿ.ಸರಸ್ವತಿ ಅವರು ಕರ್ನಾಟಕ ರಾಜ್ಯ ಸರ್ಕಾರದ ಆದೇಶವನ್ನು ಉಲ್ಲೇಖಿಸಿ, ಅದರಂತೆ ತಾವು ಬೋಧಕ ಸಿಬ್ಬಂದಿಗಳೆಂದು ಪರಿಗಣಿಸುವಂತೆ ಮಾಡಿರುವ ಮನವಿಯನ್ನು ಹಾಗೂ ಈ ಸಂಬಂಧ ಕುವೆಂಪು ವಿಶ್ವವಿದ್ಯಾನಿಲಯವು ಗ್ರಂಥಪಾಲಕರು/ಉಪ ಗ್ರಂಥಪಾಲಕರಿಗೆ ಮಾರ್ಗದರ್ಶಕರ ಮಾನ್ಯತೆಯನ್ನು ನೀಡಿರುವಂತೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನೀಡುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ ಪೂರ್ಣ ವಿವರಗಳೊಂದಿಗೆ ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗಕ್ಕೆ ಪತ್ರ ಬರೆದು ಸ್ಪಷ್ಟೀಕರಣ ಕೋರಲು |

| | |
|---|---|
| | ಹಾಗೂ ಯುಜಿಸಿ.ಯಿಂದ ಸ್ಪಷ್ಟೀಕರಣ ಬಂದ ನಂತರ ಅದರಂತೆ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |

***ಇತರೆ ವಿಷಯಗಳು:***

1. ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮಾರ್ಗಸೂಚಿಯನುಸಾರ, ಬಿ.ಓ.ಎಸ್ ಬೋರ್ಡ್‌ಗೆ ಹೊಸದಾಗಿ ಅಧ್ಯಕ್ಷ ಸ್ಥಾನವನ್ನು ಹೊಂದಿರುವ ಅಧ್ಯಾಪಕರುಗಳ ಅವಧಿ 3 ವರ್ಷಗಳಾಗಿದ್ದು, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವವರ ನಂತರ ಅರ್ಹರಾಗಿರುವ ಸದಸ್ಯರುಗಳಲ್ಲಿ ಹಿರಿಯ ಪ್ರಾಧ್ಯಾಪಕರುಗಳನ್ನು ಬಿಓಎಸ್ ಬೋರ್ಡ್‌ಗೆ ಸದಸ್ಯರಾಗಿದ್ದ ಅವಧಿ ಬಿಟ್ಟು, ಇನ್ನುಳಿದ ಅವಧಿಗೆ ಅಧ್ಯಕ್ಷರಾಗಿ ಮುಂದುವರೆಯ ಬಹುದೆಂದು ಸಿಂಡಿಕೇಟ್ ತೀರ್ಮಾನಿಸಿತು.

2. ಮಾನ್ಯ ಸದಸ್ಯರುಗಳು ವಿಶ್ವವಿದ್ಯಾನಿಲಯದಲ್ಲಿರುವ ಕೆಸೆಟ್ ಪರೀಕ್ಷಾ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ವರ್ಗಾವಣೆ ಮಾಡಲಾಗಿರುವ ಬಗ್ಗೆ ಆಕ್ಷೇಪಣೆ ಸಲ್ಲಿಸಿದರು. ಸದರಿರವರ ಆಕ್ಷೇಪಣೆಗೆ ಮಾನ್ಯ ಕುಲಪತಿಗಳು ಉತ್ತರಿಸುತ್ತಾ, ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ಗಣ್ಯರಿಂದ ಕೆಸೆಟ್‌ನಲ್ಲಿ ನಡೆಯುವ ಪರೀಕ್ಷಾ ಚಟುವಟಿಕೆಗಳ ಬಗ್ಗೆ ದೂರುಗಳು ಬಂದಿರುವುದರಿಂದ, ಆಡಳಿತದ ಹಿತದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ, ಪರೀಕ್ಷಾ ಕಾರ್ಯದಲ್ಲಿ ಯಾವುದೇ ಲೋಪದೋಷಗಳು ನಡೆಯದಂತೆ ಸುಗಮವಾಗಿ ಕಾರ್ಯನಿರ್ವಹಿಸಲು ಕೆಲವು ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರಿಂದ ಯಾವುದೇ ದೂರುಗಳು ಬಂದಿದ್ದರೆ ಸಭೆಗೆ ತಿಳಿಸಬಹುದೆಂದು ಮಾನ್ಯ ಕುಲಪತಿಗಳು ತಿಳಿಸಿದರು.

   ನಂತರ, ಪರೀಕ್ಷಾ ಕಾರ್ಯ ಸುಗಮವಾಗಿ ನಡೆಯಲು, ಮಾನ್ಯ ಕುಲಪತಿಯವರು ಆಡಳಿತಾತ್ಮಕವಾಗಿ ತೆಗೆದುಕೊಂಡಿರುವ ನಿರ್ಧಾರವನ್ನು ಸಿಂಡಿಕೇಟ್ ಅನುಮೋದಿಸಿತು.

3. ಪ್ರೊ. ವೆಂಕಟೇಶ್ ಬಿ.ಎಂ., ಸಹ ಪ್ರಾಧ್ಯಾಪಕ, ಯುವರಾಜ ಕಾಲೇಜು, ಇವರು ವಿಶ್ವವಿದ್ಯಾನಿಲಯದ ಅನುಮತಿ ಇಲ್ಲದೇ ಪತ್ರಿಕಾ ಹೇಳಿಕೆಗಳನ್ನು ನೀಡುತ್ತಿದ್ದು, ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ಒದಗುವುದರಿಂದ, ಸದರಿ ಉದ್ಯೋಗಿಗೆ ನೋಟೀಸ್ ಜಾರಿ ವಿವರಣೆ ಪಡೆಯಲು ಸಿಂಡಿಕೇಟ್ ನಿರ್ಣಯಿಸಿತು.

4. ಸಿಂಡಿಕೇಟ್ ಸಭೆಯ ಕಾರ್ಯಸೂಚಿಗಳು ಮಾನ್ಯ ಸದಸ್ಯರುಗಳಿಗೆ ತಲುಪುವುದಕ್ಕಿಂತ ಮುಂಚೆ, ಕಾರ್ಯಸೂಚಿಯ ವಿಷಯಗಳು ಸಂಬಂಧಪಟ್ಟ ವ್ಯಕ್ತಿಗಳಿಗೆ ರವಾನೆಯಾಗಿರುವ ಬಗ್ಗೆ ಹಾಗೂ ಸಭೆಯಲ್ಲಿ ಚರ್ಚಿತಗೊಂಡ ವಿಷಯಗಳು ಸುದ್ದಿವಾಹಿನಿ ಹಾಗೂ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದು, ಇದರಿಂದ ಸಭೆಯ ಗೌಪ್ಯತೆಯನ್ನು ಕಾಪಾಡಲು ವಿಫಲವಾಗಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸದಸ್ಯರುಗಳು ಸಭೆಗೆ ಸೂಚಿಸಿದರು.

   ಸೂಕ್ತ ಕ್ರಮವನ್ನು ಕೈಗೊಳ್ಳುವುದಾಗಿ ಮಾನ್ಯ ಕುಲಪತಿಗಳು ಭರವಸೆ ನೀಡಿದರು.

ಕೊನೆಯಲ್ಲಿ ಮಾನ್ಯ ಕುಲಪತಿಗಳು, ಸಿಂಡಿಕೇಟ್ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೂ ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ** **ಕುಲಪತಿ ಮತ್ತು ಅಧ್ಯಕ್ಷರು**